ಓ.ಎಸ್. ನಂಬರ 11/2018

ಪಿ.ಡಬ್ಲ್ಯೂ-1

ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 23-01-2024.

**ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ. ಸಿ.ಎಸ್.ಜಿ. ವಕೀಲರಿಂದಃ**

ಪ್ರಸ್ತುತ ದಾವೆಯನ್ನು ನನ್ನ ತಂದೆಯವರು ದಾಖಲಿಸಿರುತ್ತಾರೆ. ಸದ್ರಿಯದನ್ನು ಸರ್ವೆ ನಂ. 98 ನೇದ್ದಕ್ಕೆ ಸಂಬಂಧಿಸಿ ದಾಖಲಿಸಿರುತ್ತಾರೆ. ಸದ್ರಿಯದು ಅರಣ್ಯ ಇಲಾಖೆಗೆ ಸಂಬಂಧಿಸಿದ್ದಾಗಿರುತ್ತದೆ. ಸದ್ರಿಯದು ಒಟ್ಟೂ 785 ಎಕರೆ ಇರುತ್ತದೆ. ನಾವು ಅನುಸೂಚಿತ ಬುಡಕಟ್ಟಿನ ಜನಾಂಗಕ್ಕೆ ಸೇರಿದವರಲ್ಲ ಎಂದರೆ ನಿಜ. ಅದೇ ರೀತಿ ಪಾರಂಪರಿಕವಾಗಿ ಅರಣ್ಯವಾಸಿಗಳು ಸಹ ಇರುವುದಿಲ್ಲ. ನಮ್ಮ ತಂದೆಯವರು ಅರಣ್ಯ ಅಧಿಕಾರಿಯವರ ಕಚೇರಿಯಲ್ಲಿ ಜಮೀನನ್ನು ಜಿ.ಪಿ.ಎಸ್. ಮಾಡಲಿಕ್ಕೆ ಅರ್ಜಿಯನ್ನು ಸಲ್ಲಿಸಿದ್ದರು. ಅದರಂತೆ ಜಿ.ಪಿ.ಎಸ್. ಕಾರ್ಯವನ್ನು ಸದ್ರಿ ಇಲಾಖೆಯವರು ಮಾಡಿರುತ್ತಾರೆ. ಜಿ.ಪಿ.ಎಸ್. ಮಾಡಲು ಸಂಬಂಧಪಟ್ಟ ಇಲಾಖೆಯವರಿಗೆ ಜಮೀನನ್ನು ನನ್ನ ತಂದೆಯೇ ತೋರಿಸಿರುತ್ತಾರೆ. ಅದರ ಅಗಲ ಮತ್ತು ಉದ್ದ ಎಷ್ಟು ಇದೆ ಎಂದರೆ ಸಾಕ್ಷಿಯು 16 ಗುಂಟೆ ಇದೆ ಎಂದು ನುಡಿದಿರುತ್ತಾರೆ. ಸದ್ರಿಯದರ ಚತುರ್ಗಡಿಃ ಪೂರ್ವಕ್ಕೆ - ದಿಲೀಪ ಬಾಬುರಾವ್ ಆರೂರವರ ಜಮೀನು , ಪಶ್ಚಿಮಕ್ಕೆ - ಹುಬ್ಬಳ್ಳಿ -ಶಿರಸಿ ರಸ್ತೆ, ಉತ್ತರಕ್ಕೆ - ನಿರ್ಮಲಾ ಶರತಚಂದ್ರ ಕಂಬಿಮಠ ರವರಿಗೆ ಸಂಬಂಧಿಸಿದ ಸರ್ವೆ ನಂ. 90 ರ ಜಮೀನು, ದಕ್ಷಿಣಕ್ಕೆ - ಬೊಮ್ಮನಳ್ಳಿ -ಕಾತೂರಕ್ಕೆ ಹೋದ ರಸ್ತೆ ಇರುತ್ತದೆ. ದಾವಾಸ್ತಿಯ ಉದ್ದ ಮತ್ತು ಅಗಲ ಎಷ್ಟು ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ತಂದೆಯವರು ಅರ್ಜಿಯನ್ನು ಬುಡಕಟ್ಟು ವ್ಯವಹಾರ ಮಂತ್ರಾಲಯಕ್ಕೆ ನಮೂನೆ -1 ನ್ನು ಸಲ್ಲಿಸಿರುತ್ತಾರೆ. ಸದ್ರಿ ಅರ್ಜಿಯನ್ನು ದಾಖಲಿಸಲು ನಿಮಗೆ ಯಾವುದೇ ಅರ್ಹತೆ ಇರಲಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೇಳಿದ್ದರಿಂದ ಕಲ್ಪಿಸಲಾಯಿತು.**

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ. ಸರಿ ಇದೆ.

Sd/-

**ಸಿವಿಲ್ ಜಡ್ಜ, ಮುಂಡಗೋಡ.**